# ವಂಚನೆಯ ತಲೆಪಟ್ಟಿ

ಕಳೆದ ವಾರ ಪತ್ರಿಕೆಗಳಲ್ಲಿ ಆಘಾತಕಾರಿಯಾದ ಸುದ್ದಿಯೊಂದು ಹರಿದಾಡಿತು. ಅದನ್ನು ಯಾರೂ ಅಷ್ಟು ಗಂಭೀರವಾಗಿ ಪರಿಗಣಿಸಿದಂತೆ ಕಾಣಲಿಲ್ಲ. ಭಾರತ ಜಗತ್ತಿನಲ್ಲಿ ಮೂರನೆಯ ವಂಚಕ ರಾಷ್ಟ್ರ ಎಂಬುದೇ ಆ ಸುದ್ದಿ. ಅಮೆರಿಕದ ಕ್ರೋಲ್ ಸಂಸ್ಥೆಯು ಆರು ಖಂಡಗಳ ವಿವಿಧ ದೇಶಗಳಲ್ಲಿನ ಬೃಹತ್ ಕಂಪೆನಿಗಳ ವ್ಯವಹಾರ ನೀತಿಯನ್ನು ಸರ್ವೇಕ್ಷಣೆಯ ಮೂಲಕ ಅಭ್ಯಾಸ ಮಾಡಿ ಈ ಸತ್ಯವನ್ನು ಹೊರಹಾಕಿದೆ. ಭಾರತದಲ್ಲಿ ಶೇ.80 ರಷ್ಟು ಕಂಪೆನಿಗಳು ತಾವು ಭ್ರಷ್ಟಾಚಾರ ಮತ್ತು ಲಂಚಗುಳಿತನದಿಂದ ವಂಚನೆಗೊಳಗಾಗಿದ್ದೇವೆ ಎಂದು ಹೇಳಿಕೊಂಡಿವೆ. ಸಾರ್ವಜನಿಕ ಕೊಳ್ಳುವಿಕೆಯಲ್ಲಿ, ಸೇವಾಕ್ಷೇತ್ರದಲ್ಲಿ ಉಪಭೋಗೀ ಸಂಸ್ಥೆಗಳು ಮತ್ತು ಸರಬರಾಜುದಾರರ ನಡುವೆ ಇರುವ ಅನೈತಿಕ ಮೈತ್ರಿಯಿಂದ ಇದು ನಡೆಯುತ್ತದೆ. ನ್ಯಾಯಾಂಗ ವ್ಯವಸ್ಥೆಯನ್ನು ಸಹ ಈ ವರದಿ ಟೀಕಿಸುತ್ತದೆ. ಅಲ್ಲಿರುವ ವಿಳಂಬ ನೀತಿ ಮತ್ತು ಅಪ್ರಾಮಾಣಿಕ ನಡೆಗಳು ಗ್ರಾಹಕರು ಅನ್ಯಾಯಗಳನ್ನು ಪ್ರಶ್ನಿಸದಂತೆ ತಡೆಯುತ್ತವೆ ಎಂಬುದು ಅದರ ಅಭಿಪ್ರಾಯ.

ಈ ವಂಚಕ ರಾಷ್ಟ್ರಗಳ ಮೊದಲೆರಡು ಹೆಸರುಗಳನ್ನು ಕೇಳಿದರೆ ಮತ್ತಷ್ಟು ನೋವಾಗುತ್ತದೆ. ಮೊದಲನೆಯದು ಕೊಲಂಬಿಯಾ. ದಕ್ಷಿಣ ಅಮೆರಿಕದ ಒಂದು ಪುಟ್ಟ ದೇಶ. ಗಾಂಜಾ/ಅಫೀಮನ್ನು ರಾಜಾರೋಷವಾಗಿ ಬೆಳೆದು ಸಿರಿವಂತ ದೇಶಗಳಿಗೆ ಮಾರುವ, ಡ್ರಗ್ ಮಾಫಿಯಾ ಮತ್ತು ಪಾತಕ ಲೋಕ ಬೇರುಬಿಟ್ಟಿರುವ ದೇಶ ಅದು. ಎರಡನೆಯದು ಸಬ್ ಸಹರಾ ಆಫ್ರಿಕಾ. ಇವು ಸಹರಾ ಮರುಭೂಮಿಯ ಆಸುಪಾಸಿನ ಸಣ್ಣಪುಟ್ಟ ಬಡ ದೇಶಗಳು. ಅಭಿವೃದ್ಧಿಶೀಲ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವೊಂದು ದುಷ್ಟ ಮಾರ್ಗ ಹಿಡಿದಿರುವ ಈ ಅನಾಮಿಕ, ಅರಾಜಕ ರಾಷ್ಟ್ರಗಳ ಬೆನ್ನುಬಿದ್ದಿರುವುದು ಖೇದವೆನಿಸುತ್ತದೆ.

ಯಾರೇ ದೇಶವಾಸಿಗಳಿಗೆ ಈ ಸತ್ಯವನ್ನು ಜೀರ್ಣಿಸಿಕೊಳ್ಳುವುದು ಸ್ವಲ್ಪ ಕಷ್ಟವೆ. ನಿಂದನೆಯಿಂದ ಒಬ್ಬ ಸಾಮಾನ್ಯನೂ ನೊಂದುಕೊಳ್ಳುವುದು ಸಹಜ. ಈ ಸ್ಥಿತಿಗೆ ಭಾರತ ಬರಲು ಕಾರಣಗಳೇನು ಎಂದು ತಿಳಿದುಕೊಳ್ಳುವುದು ಮತ್ತು ಆ ಕಳಂಕದಿಂದ ಪಾರಾಗಲು ಪ್ರಯತ್ನಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಕೇವಲ ಸಂಪತ್ತಿನ ನಿರ್ಮಾಣ, ಆರ್ಥಿಕ ಪ್ರಗತಿ ದೇಶದ ಘನತೆಯನ್ನು ಎತ್ತಿ ಹಿಡಿಯುದಿಲ್ಲ. ದೇಶದ ಔನ್ನತ್ಯವನ್ನು ಸಾರುವುದು ಅದರ ಸಂಸ್ಕೃತಿ. ಸಂಸ್ಕೃತಿಯನ್ನು ಕೊಳ್ಳಲಾಗದು, ಪೂಜೆ ಪುನಸ್ಕಾರದಿಂದ ಅಥವಾ ದೇವರ ಅನುಗ್ರಹದಿಂದ ಪಡೆಯಲಾಗದು. ಅದು ದೊರಕುವುದು ಸಂಸ್ಕಾರದಿಂದ. ಹುಟ್ಟಿನಿಂದಲೇ ಪ್ರಾರಂಭವಾಗುವ ಈ ಕ್ರಿಯೆ ಕುಟುಂಬ, ಪರಿಸರ, ಶಿಕ್ಷಣ ಹಾಗೂ ಸಮಾಜದಿಂದ ಬೆಳವಣಿಗೆಯ ವಿವಿಧ ಹಂತಗಳಲ್ಲಿ ವ್ಯಕ್ತಿಯೊಳಗೆ ರೂಪುಗೊಳ್ಳುತ್ತದೆ. ಮನೆಯನ್ನು, ಬೀದಿಯನ್ನು ಸ್ವಚ್ಛಗೊಳಿಸುವುದರಿಂದ ಭಾರತದ ಬಾಹ್ಯರೂಪವನ್ನು ಬದಲಿಸಬಹುದು, ಆದರೆ ಭಾರತದ ಅಂತರಂಗವನ್ನು ಬದಲಿಸಲು ಮನಸ್ಸುಗಳು ಸ್ವಚ್ಛಗೊಳ್ಳಬೇಕು. ಅದನ್ನೇ ಸಂಸ್ಕಾರವೆಂದು ಕರೆಯುವುದು.

ನಮ್ಮ ಮನಸ್ಸು ಯಾಕೆ ಇಷ್ಟು ಸ್ವಾರ್ಥಪರವಾಗುತ್ತದೆ. ತನ್ನದೇ ಆದ ಪರಿಸರವನ್ನು, ಸಮಾಜವನ್ನು, ಸರ್ಕಾರವನ್ನು ಕಡೆಗಣಿಸುತ್ತಾ ಯಾಕೆ ವಂಚನೆಗೆ ಇಳಿಯುತ್ತದೆ ಎಂಬುದು ಕುತೂಹಲಕರವಾಗಿದೆ. ಅತ್ಯಂತ ಹೆಚ್ಚು ಕೋಟ್ಯಧಿಪತಿಗಳಿರುವ (billionaires) ಮೊದಲ ಹತ್ತು ದೇಶಗಳಲ್ಲಿ ಭಾರತ ಸ್ಥಾನ ಪಡೆದುಕೊಂಡಿದೆ. ಆದರೆ ತಲಾವಾರು ಆದಾಯದಲ್ಲಿ (per capita) 150ನೇ ಸ್ಥಾನದಲ್ಲಿದೆ. ಈ ವೈರುಧ್ಯವನ್ನು ಹೇಗೆ ವ್ಯಾಖ್ಯಾನಿಸುವುದು! ತಲಾ ಆದಾಯದಲ್ಲಿ ಭಾರತಕ್ಕಿಂತಲೂ ಕೆಳಗಿರುವ ದೇಶಗಳೆಂದರೆ ನೇಪಾಳ, ಬಾಂಗ್ಲಾ, ಮೊಜಾಂಬಿಕ್, ಕೀನ್ಯಾ ಮುಂತಾದ ಸಣ್ಣ ಪುಟ್ಟ ದೇಶಗಳು. ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಮುಂದುವರೆಯುತ್ತಿರುವ ದೊಡ್ಡ ದೇಶಗಳೊಡನೆ ಹೋಲಿಕೆಯೆ ಇಲ್ಲ ಎಂಬುದನ್ನು ಈ ಹಿಂದೆ ಈ ಅಂಕಣದಲ್ಲಿ ಚರ್ಚಿಸಲಾಗಿದೆ. ಪ್ರಜೆಗಳನ್ನು ಬಡತನದಲ್ಲಿರಿಸಿ ಕ್ಷಿಪಣಿಗಳನ್ನು ಅಂತರಿಕ್ಷದಲ್ಲಿ ಹಾರಿಸಿ ಯುದ್ಧಸನ್ನದ್ಧರಾಗುವುದು ಯಾವ ಪುರುಷಾರ್ಥಕ್ಕೆ? ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ವೇಗವಾಗಿ ಬೆಳೆದು ತಲೆಮಾರಿನಿಂದ ತಲೆಮಾರಿಗೆ ಅನೇಕ ವಿಸ್ಮಯಗಳನ್ನು ನೀಡುತ್ತಿರುವ ಜಗತ್ತಿನಲ್ಲಿ ಭಾರತ ಯಾವ ವರ್ಗವನ್ನು ಪ್ರತಿನಿಧಿಸುತ್ತದೆ?

ಎದ್ದುಕಾಣುವ ವಂಚನೆಯೆಂದರೆ ತೆರಿಗೆ ಪಾವತಿಯನ್ನೇ ಉದಾಹರಣೆಯಾಗಿ ನೋಡಬಹುದು. 125 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ತೆರಿಗೆ ದಾಖಲೆ ಸಲ್ಲಿಸುವವರು ಸುಮಾರು ಮೂರು ಕೋಟಿ ಜನರು. ಅವರಲ್ಲಿ ತೆರಿಗೆ ಪಾವತಿದಾರರು ಕೇವಲ ಒಂದು ಕೋಟಿ ಜನರು. ಕಳೆದೆರಡು ದಶಕದಿಂದ ಜಾಗತೀಕರಣಕ್ಕೆ ತೆರೆದುಕೊಂಡಿರುವ ದೇಶ ಅಗಾಧ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿದೆ. ತಕರಾರು ಇರುವುದು ಆರ್ಥಿಕ ಅಸಮಾನತೆಯ ಬಗ್ಗೆ. ಬೆಳೆಯುತ್ತಿರುವ ನಗರಗಳಲ್ಲಿ ವೈಭವೋಪೇತ ಮನೆಗಳು ನಿರ್ಮಾಣವಾಗುತ್ತಿವೆ. ಕೋಟ್ಯಂತರ ಐಷಾರಾಮಿ ಕಾರುಗಳು ರಸ್ತೆಯಲ್ಲಿ ಓಡಾಡುತ್ತವೆ. ಇವರ ಸಂಖ್ಯೆ ಒಂದು ಕೋಟಿ ದಾಟುವುದಿಲ್ಲ ಎಂದರೆ ವ್ಯವಸ್ಥೆಯಲ್ಲಿಯೆ ಹುಳುಕಿದೆ ಎಂದರ್ಥ. ಈಗ ವ್ಯಾಪಕವಾಗಿ ಪ್ರಚಾರಕ್ಕೊಳಗಾಗಿರುವ ಯೋಗವು ಒಂದು ದಿನ ವಂಚನೆ ಎಂದು ಅನಿಸದಿದ್ದರೆ ಅದು ಈ ದೇಶದ ಪುಣ್ಯ.

ಒಮ್ಮೆ ಬುದ್ಧನ ಬಳಿಗೆ ಜ್ಞಾನಿಯೊಬ್ಬ ಬಂದು ಮಾತಿಲ್ಲದ, ಮಾತು ಇದ್ದೂ ಇಲ್ಲದ ಒಂದು ಸತ್ಯವನ್ನು ಹೇಳು ಎಂದು ಕೇಳುತ್ತಾನೆ. ಎಂದಿನಂತೆ ಬುದ್ಧ ಅವನತ್ತ ನೋಡಿ ಒಂದು ಸ್ನಿಗ್ಧ ನಗು ನೀಡುತ್ತಾನೆ. ಸ್ವಲ್ಪ ಹೊತ್ತಿನ ನಂತರ ಜ್ಞಾನಿಯು ಸಂತುಷ್ಟನಾಗಿ ನನಗೆ ಸತ್ಯದ ಅರಿವಾಯಿತು ಎಂದು ಹೇಳಿ ಹೊರಟುಬಿಡುತ್ತಾನೆ. ಆನಂದನಿಗೆ ಆಶ್ಚರ್ಯವಾಗಿ ಇದೇನಿದು, ನೀವು ಏನನ್ನೂ ಹೇಳಲಿಲ್ಲ, ಆತ ಹಾಗೆಯೆ ನಡೆದುಹೋದ! ಏನಿದರ ಅರ್ಥ ಎಂದು ಕೇಳುತ್ತಾನೆ. ಅದಕ್ಕೆ ಬುದ್ಧನ ಉತ್ತರ ಹೀಗಿದೆ. 'ಒಳ್ಳೆಯ ಕುದುರೆಯು ಬಾರುಕೋಲಿನ ನೆರಳು ಕಂಡರೆ ಓಡುತ್ತದೆ'.

ಭಾರತ ಈಗ ಎಚ್ಚೆತ್ತುಕೊಳ್ಳದಿದ್ದರೆ ಉಪಗ್ರಹಗಳು, ಕ್ಷಿಪಣಿಗಳು, ಯೋಗ ಯಾವುದೂ ಉಪಯೋಗಕ್ಕೆ ಬರಲಾರವು.

■ ಮೂಚಿ

## ಮಾತೇ ಮುತ್ತು

★ ಉದಾರವಾಗಿ ಹಂಚಿಕೊಳ್ಳದಿದ್ದರೆ ನಿಮ್ಮ ಯಶಸ್ಸು ಮತ್ತು ಸಂತೋಷ ನಿಮ್ಮನ್ನು ಕ್ಷಮಿಸುವುದಿಲ್ಲ.

ಆಲ್ಬರ್ಟ್ ಕಾಮೂ

★ ಸಮಾನತೆಯನ್ನು ಇತಿಹಾಸ ಮತ್ತು ಸಮಾಜಶಾಸ್ತ್ರದಲ್ಲಿ ಓದುತ್ತೇವೆ. ನಿಜಜೀವನದಲ್ಲಿ ಅದು ಇರುವುದಿಲ್ಲ.

ಆರ್ಥರ್ ಆ್ಯಶ್

★ ನಾವು ತುಂಬಾ ಗೋಡೆಗಳನ್ನು ನಿರ್ಮಿಸುತ್ತೇವೆ, ಸಾಕಷ್ಟು ಸೇತುವೆಗಳನ್ನು ಕಟ್ಟುವುದಿಲ್ಲ.

ಐಸಾಕ್ ನ್ಯೂಟನ್

★ ನೀವು ನೀವಾಗಿರಲು ಪೂರ್ಣ ಸ್ವಾತಂತ್ರ್ಯ ಕೊಡುವವನೇ ನಿಜವಾದ ಗೆಳೆಯ.

ಜಿಮ್ ಮಾರಿಸನ್

★ ಕತ್ತಲೆಯಿಂದ ಕತ್ತಲೆಯನ್ನು ಓಡಿಸಲಾಗದು; ಬೆಳಕಿನಿಂದ ಮಾತ್ರ ಕತ್ತಲೆಯನ್ನು ಓಡಿಸಲು ಸಾಧ್ಯ.

—ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಸಂಪ್ರದಾಯದ ಬಾವಿಯಲ್ಲಿ ತೇಲುವುದು ಒಳ್ಳೆಯದು. ಅದರಲ್ಲಿ ಮುಳುಗುವುದು ಆತ್ಮಹತ್ಯೆ.

—ಮಹಾತ್ಮ ಗಾಂಧಿ

★ ಆಡದೆ ಉಳಿದ ಮಾತುಗಳಿಗೆ ನಾವೇ ದೊರೆಗಳು. ಆದರೆ ಆಡಿದ ಮಾತುಗಳಿಗೆ ನಾವು ಗುಲಾಮರು.

—ವಿನ್‌ಸ್ಟನ್ ಚರ್ಚಿಲ್

★ ಇತರರನ್ನು ಹೆಚ್ಚು ಪ್ರೀತಿಸುವ ಮನಸ್ಸುಳ್ಳವರು ಹೆಚ್ಚು ಸಂತೋಷವಾಗಿರುತ್ತಾರೆ.

—ಗೌತಮ ಬುದ್ಧ

★ ನಿದ್ದೆಯಲ್ಲಿ ಕಾಣುವಂತದ್ದು ಕನಸಲ್ಲ, ನಿದ್ದೆಗೆಡುವಂತೆ ಮಾಡುವುದಿದೆಯಲ್ಲ ಅದು ನಿಜವಾದ ಕನಸು.

—ಡಾ. ಎ.ಪಿ.ಜೆ. ಅಬ್ದುಲ್ ಕಲಾಂ